**ದಿನಾಂಕ: 04-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ_ಪಾಟೀ ಸವಾಲು : ಶ್ರೀ ಬಿ ವಿ ಆರ್ ವಕೀಲರಿಂದ ಆರೋಪಿ ಪರವಾಗಿಃ**

8) ದಿಃ 23-03-2021 ರಂದು ಒಂದು ಮೂಟೆ ಶುಂಠಿಗೆ ರೂ.1200/- ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಸಮಯದಲ್ಲಿ ಕೊರೋನಾ ಇದ್ದು, ಒಂದು ಮೂಟೆ ಶುಂಠಿಗೆ ರೂ.1200/-ಇರಲಿಲ್ಲ ಇದನ್ನು ಕೇಸಿನ ಸಲುವಾಗಿ ಸೃಷ್ಟಿ ಮಾಡಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಶುಂಠಿ ತೆಗೆದುಕೊಂಡು ಹೋದ ದಿನ ಚೆಕ್ ಆಗಲೀ ರಶೀದಿಯನ್ನಾಗಲೀ ಪಡೆದುಕೊಂಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ವಿಶ್ವಾಸದಿಂದ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಶುಂಠಿ ತೆಗೆದುಕೊಂಡು ಹೋದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಸಾಕ್ಷಿಗಳು ಇದ್ದಾರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇದ್ದಾರೆ ಎಂದು ನುಡಿಯುತ್ತಾರೆ.

9) ನಿಪಿ 1 ವಿಜಯ ಬ್ಯಾಂಕ್ ಗೆ ಸೇರಿದ ಚೆಕ್ ಎಂದರೆ ಸರಿ. ನಿಪಿ1 ಕ್ಕೆ ಬ್ಯಾಂಕ್ ಆಫ್ ಬರೋಡಾ ಸೀಲ್ ನ್ನು ಹಾಕಿಸಿಕೊಂಡು ಬಂದಿದ್ದೀರಿ ಎಂದು ಸೂಚಿಸಲಾಗಿ ಸಾಕ್ಷಿ ಬ್ಯಾಂಕ್ ಮರ್ಜ್ ಆಗಿದೆ ಎಂದು ನುಡಿಯುತ್ತಾರೆ. ನಿಪಿ 1 ಚೆಕ್ ಕ್ರಾಸ್ ಚೆಕ್ ಅಲ್ಲ , ಅದನ್ನು ನಾನೇ ನೇರವಾಗಿ ವಿಜಯ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

10) ನನ್ನ ಖಾತೆ ವಿಜಯ ಬ್ಯಾಂಕ್ ನಲ್ಲಿ ಇರುತ್ತದೆ. ಖಾತೆ ಇರುವ ಕಾರಣ ಬ್ಯಾಂಕ್ ಮ್ಯಾನೇಜರ್ ಚೆನ್ನಾಗಿ ಪರಿಚಯ ಎಂದರೆ ಸರಿಯಲ್ಲ. ಬ್ಯಾಂಕ್ ಮರ್ಜ್ ಆದ 2 ವರ್ಷಗಳ ಆದ ನಂತರ ಚೆಕ್ ನ್ನು ಹಾಜರುಪಡಿಸಿರುವ ಕಾರಣ ಚೆಕ್ ಚಲಾವಣೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ದಿಃ 01-04-2019 ರಿಂದ ಬ್ಯಾಂಕ್ ಮರ್ಜ್ ಆಗಿದ್ದು, ಈ ದಿನಾಂಕದಿಂದ 6 ತಿಂಗಳುಗಳ ಕಾಲ ಮಾತ್ರ ವಿಜಯ ಬ್ಯಾಂಕ್ ನ ಚೆಕ್ ಚಲಾವಣೆಯಲ್ಲಿತ್ತು ಎಂದು ಸೂಚಿಸಲಾಗಿ ಸಾಕ್ಷಿ ಚಲಾವಣೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. 2 ವರ್ಷ 2 ತಿಂಗಳು ಆಗಿರುವ ಕಾರಣ ನಿಪಿ 1 ಚೆಕ್ ಚಲಾವಣೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ.

11) ನೀವು ವಿದ್ಯಾವಂತರಾಗಿದ್ದು ಚೆಕ್ ಚಲಾವಣೆಯಲ್ಲಿ ಇಲ್ಲ ಬೇರೆ ಚೆಕ್ ನ್ನು ನೀಡಿ ಎಂದು ಏನಾದರೂ ಕೇಳಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಚೆಕ್ ಚಲಾವಣೆಯಲ್ಲಿ ಇದ್ದಿದ್ದು, ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಚೆಕ್ ನೀಡಿದ್ದರೇ ನೀವು ಬೇರೆ ಚೆಕ್ ಕೊಡಿ ಎಂದು ಕೇಳುತ್ತಿದ್ದೀರಿ, ಹೀಗಾಗಿ ಚೆಕ್ ನ್ನು ಆರೋಪಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

12) ದಿಃ 23-06-2021 ರ ಚೆಕ್ ನ್ನು ಆರೋಪಿ ನನಗೆ ಯಾವಾಗಲೂ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬ್ಯಾಂಕ್ ಮ್ಯಾನೇಜರ್ ಪರಿಚಯ ಇದ್ದ ಕಾರಣ ಚೆಕ್ ಮಾನ್ಯತೆ ಇಲ್ಲದೇ ಇದ್ದರೂ ನಿಪಿ 2 ನ್ನು ಸೃಷ್ಟಿ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಸಿ 1(ಎ) ಸಹಿಯಲ್ಲಿ ಸ್ಪಷ್ಟವಾಗಿ ಎನ್ ಎಂದು ಇದೆ ಎನ್ನುವುದು ಸರಿ. ನಿಸಿ 5 ಅಂಚೆ ಸ್ವಿಕೃತಿಯಲ್ಲಿ ಸಹಿಯು ಎಂ ಎಂದು ಕಾಣುತ್ತಿದೆ ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ ಎನ್ ಎಂದು ಕಾಣುತ್ತಿದೆ ಎಂದು ನುಡಿಯುತ್ತಾರೆ. ಅದು ಸ್ಪಷ್ಟವಾಗಿ ಎಂ ಎಂದು ಕಾಣುತ್ತಿದ್ದರೂ ಎನ್ ಎಂದು ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13) ನಿಸಿ 5 ರಲ್ಲಿರುವ ಸಹಿ ಆರೋಪಿಗೆ ಸಂಬಂಧಿಸಿದ್ದಲ್ಲ ಎಂದು ಸೂಚಿಸಲಾಗಿ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮತ್ತು ಆರೋಪಿಯ ನಡುವೆ ಯಾವುದಾದರು ವ್ಯವಹಾರ ನಡೆದಿತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಅವರಿಗೆ ಹಿಂದೆ ಶುಂಠಿ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಆರೋಪಿಗೆ 2-3 ವರ್ಷ ಶುಂಠಿ ಕೊಟ್ಟಿರುತ್ತೇನೆ. ನಮ್ಮ ಊರಿನಲ್ಲಿ ಬೇರೆಯವರಿಂದ ಶುಂಠಿ ಕೊಡಿಸಿರುವುದಿಲ್ಲ, ನಿಮ್ಮ ಊರಲ್ಲಿ ಆರೋಪಿ ಬೇರೆಯವರದನ್ನು ಶುಂಠಿ ತೆಗೆದುಕೊಂಡಿ ಹೋಗಿದ್ದಾರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

14) ನಿಮ್ಮ ಮತ್ತು ಆರೋಪಿಯ ನಡುವೆ ಯಾವುದೋ ಒಂದು ವ್ಯವಹಾರಕ್ಕೆ ಬೇಲೂರು ಪೊಲೀಸ್ ಠಾಣೆಗೆ ಕರೆಸಿ ವಿಚಾರಣೆ ಮಾಡಲಾಗಿತ್ತು ಎಂದು ಸೂಚಿಸಲಾಗಿ ಸಾಕ್ಷಿ ವಿಚಾರಣೆ ಮಾಡಿಲ್ಲ ಗಲಾಟೆ ಆಗಿತ್ತು ಎಂದು ನುಡಿಯುತ್ತಾರೆ. ಗಲಾಟೆಯ ವಿಚಾರವಾಗಿ ನನ್ನನ್ನು ಮತ್ತು

ಆರೋಪಿಯನ್ನು ಕರೆದು ಕೇಳಿದ್ದರು ಎಂದು ನುಡಿಯುತ್ತಾರೆ. ಠಾಣೆಯಲ್ಲಿ ಯಾವುದೇ ತೀರ್ಮಾನ ಆಗಿರುವುದಿಲ್ಲ. ಯಾವ ವಿಚಾರ ಎಂದು ಪ್ರಶ್ನಿಸಲಾಗಿ ಸಾಕ್ಷಿ ಇದೇ ದುಡ್ಡು ಕೊಡುವ ವಿಚಾರ ಎಂದು ನುಡಿಯುತ್ತಾರೆ. ಈ ಗಲಾಟೆ 2021 ರಲ್ಲಿ ಆಗಿರುತ್ತದೆ.

15) ಪಿರ್ಯಾದಿಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ರೂ.1200/- ರಂತೆ 400 ಮೂಟೆ ಶುಂಠಿಯನ್ನು ಆರೋಪಿಗೆ ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.4,80,000/- ಕ್ಕೆ ಚೆಕ್ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಶುಂಠಿ ಬೆಳೆ ಬೆಳೆದಿರಲಿಲ್ಲ ಆರೋಪಿ ನನ್ನ ಹತ್ತಿರ ಶುಂಠಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಬೇರೆಯವರಿಂದ ಚೆಕ್ ನ್ನು ಪಡೆದು ಈ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ.

16) ನೋಟೀಸ್ ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ನನಗೆ ಯಾವುದೇ ಹಣ ಕೊಡಲು ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .